## ವಾರ್ತಾ ವಿಶ್ಲೇಷಣೆ

### ಕಲೆಗೆ ಆಸರೆ

ಕಚ್ ಪ್ರದೇಶದ ಮರುಭೂಮಿಯಲ್ಲಿ ವಾಸಿಸುವ ಜನಾಂಗಗಳ ಕಲಾ ನೈಪುಣ್ಯವನ್ನು, ಜಾನಪದ ವರ್ಣಚಿತ್ರಗಳನ್ನು ಮೆಚ್ಚಿಕೊಂಡು ಶ್ರೀಮತಿ ಚಂದಾ ಶ್ರಾಫ್ ಅವರು ಒಂದು ಸಂಸ್ಥೆಯನ್ನೇ ಅವರಿಗಾಗಿ ಪ್ರಾರಂಭಿಸಿದರು. 'ಸೃಜನ್' ಎಂಬ ಈ ಸಂಸ್ಥೆಯನ್ನು ನಡೆಸುತ್ತಿರುವ ೭೩ ವರ್ಷ ವಯಸ್ಸಿನ ಈ ಮಹಿಳೆ, ನಶಿಸಿಹೋಗುತ್ತಿದ್ದ ಒಂದು ಕಲೆಗೆ ಜೀವ ತುಂಬಿದ್ದಾರೆ. ಈ ಸಂಸ್ಥೆಯ ಮೂಲಕ ಬಡತನದ ಬೇಗುದಿಯಲ್ಲಿ ಬೆಂದು ಬಳಲಿದ್ದ ಹೆಂಗಸರಿಗೆ ಆಶಾಕಿರಣ ತೋರುವಲ್ಲಿ ಸಫಲರಾಗಿದ್ದಾರೆ. ಈಗ ಇಲ್ಲಿನ ಮಹಿಳೆಯರು ಹೆಚ್ಚಿನ ಆದಾಯವನ್ನು ಪಡೆಯುತ್ತಿದ್ದಾರೆ, ಹೊಸ ಮಾರುಕಟ್ಟೆಗಳಿಗೆ ತಮ್ಮ ಕೈಯಿಂದ ತಯಾರಾದ ಕಸೂತಿ ವಸ್ತಗಳನ್ನು ರವಾನಿಸುತ್ತಿದ್ದಾರೆ ಹಾಗೂ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಸಾಮರ್ಥ್ಯವನ್ನು ಪಡೆದುಕೊಂಡು, ಆಧುನಿಕ ವಿಧಾನಗಳಿಂದ ತಮ್ಮ ನೈಪುಣ್ಯತೆಯನ್ನು ವರ್ಧಿಸಿಕೊಳ್ಳುತ್ತಿದ್ದಾರೆ.

ಜಗತ್ಪ್ರಸಿದ್ಧ ರೋಲೆಕ್ಸ್ ಗಡಿಯಾರಗಳ ಸಂಸ್ಥೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉದ್ಯಮಿಗಳನ್ನು, ಸಾಹಸಿಗಳನ್ನು ಪರಿವರ್ತನೆಯ ಹರಿಕಾರರನ್ನು ಗುರುತಿಸಿ, ಅವರಿಗೆ ಪ್ರತಿವರ್ಷವೂ ಒಂದು ಪುರಸ್ಕಾರವನ್ನು ನೀಡುತ್ತಿದೆ. ಇದರಿಂದ ೨೦೦೬ರಲ್ಲಿ ಪುರಸ್ಕಾರ ಪಡೆದಿರುವವರ ಪೈಕಿ ಪ್ರಥಮ ಭಾರತೀಯರು ಶ್ರೀಮತಿ ಚಂದಾ. 'ದಿ ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ೨೦೦೬, ನವೆಂಬರ್ ೨೩ರ ಸಂಚಿಕೆಯಲ್ಲಿ ಇವರ ಸಂದರ್ಶನವನ್ನು ಪ್ರಕಟಿಸಲಾಗಿತ್ತು.

೧೯೬೯ರಲ್ಲಿ ಕಚ್ ಪ್ರದೇಶದಲ್ಲಿ ನಡೆಯುತ್ತಿದ್ದ ರಾಮಕೃಷ್ಣ ಮಿಷನ್ ಬರಪರಿಹಾರ ಕಾರ್ಯಕ್ರಮದಲ್ಲಿ ಭಾಗವಹಿಸಲು ಈಕೆ ಪತಿಯೊಂದಿಗೆ ಹೋಗಿದ್ದರು. ಇವರು ಬೆಳೆದ ಪ್ರದೇಶವೇ ಕಚ್ ಆದರೂ ಅಲ್ಲಿಯ ಗ್ರಾಮೀಣ ಮಹಿಳೆಯರು ತೊಟ್ಟುಕೊಳ್ಳುತ್ತಿದ್ದ ಸುಂದರ ಕಸೂತಿಯುಳ್ಳ ವಸ್ತ್ರಗಳನ್ನು ನೋಡಿ ಸೆಳೆಯಲ್ಪಟ್ಟರು. ಸೂಕ್ಷ್ಮವಾದ, ಹಲವಾರು ಬಣ್ಣಗಳಿಂದ ಕೂಡಿರುವ ಈ ಕಸೂತಿ ಕಲೆಯನ್ನು ಕಂಡು ಮೆಚ್ಚಿದರು. ದೀರ್ಘಕಾಲ ಬಾಳುವ ಈ ಬಟ್ಟೆಗಳ ಮೌಲ್ಯವನ್ನೂ ಗುರುತಿಸುವ ವಿಚಾರಶೀಲತೆ ಈಕೆಗಿತ್ತು. ಈ ಕಲೆಯನ್ನು ಉಳಿಸಬೇಕೆಂಬ ಕಾಳಜಿಯಿಂದ ಏಕಾಂಗಿಯಾಗಿ ಈಕೆ ಒಂದು ವಿಶೇಷ ಸಂಸ್ಥೆಯನ್ನೇ ಪ್ರಾರಂಭಿಸಿಬಿಟ್ಟರು!

ಈ ಕಲೆಯನ್ನು ಚೆನ್ನಾಗಿ ಕರಗತ ಮಾಡಿಕೊಳ್ಳಲು ನಿಷ್ಠೆ, ತಾಳ್ಮೆ ಹಾಗೂ ಶ್ರಮಯುಕ್ತ ಕೈಕೆಲಸಗಳು ಅಗತ್ಯ. ಬಹಳಷ್ಟು ಸಮಯವೂ ಬೇಕಾಗುತ್ತದೆ. ಒಂದು ಕಸೂತಿ ವಸ್ತ್ರದ ಹಿನ್ನೆಲೆಯಲ್ಲಿರುವ ಪರಿಶ್ರಮದ ಪರಿಚಯ ಗಿರಾಕಿಗಳಿಗಿರುವುದಿಲ್ಲ. ಈ ಕೊರತೆಯನ್ನು ಸೃಜನದ ಮೂಲಕ ನಿವಾರಿಸುವತ್ತ ಈಕೆ ಮೊದಲು ಗಮನ ಹರಿಸಿದರು. ಆರ್ಥಿಕವಾಗಿ, ಭಾವನಾತ್ಮಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಗ್ರಾಮೀಣ ಮಹಿಳೆಯರನ್ನು ಪೋಷಿಸುತ್ತ ಅವರಿಗೆ ಆಸರೆಯಾದರು. ಇಂದು 'ಸೃಜನ್'ದೊಂದಿಗೆ ಕೆಲಸಮಾಡುತ್ತಿರುವ ಮಹಿಳೆಯರು ಬಡತನವನ್ನು ಮರೆತಿದ್ದಾರೆ. ವಸ್ತ್ರವು ತಯಾರಾದ ಕೂಡಲೇ, ಅದು ಮಾರಾಟವಾಗದೇ ಹೋದರೂ, ಮಹಿಳೆಯರಿಗೆ ಅದರ ಬೆಲೆಯನ್ನು ನೀಡಲಾಗುತ್ತದೆ. ಈ ಪ್ರದೇಶದ ೫೦೦ ಚದರ ಕಿ.ಮೀ.ಗಳ ವಿಸ್ತಾರವುಳ್ಳ ೧೧೪ ಗ್ರಾಮಗಳಲ್ಲಿನ ಮಹಿಳೆಯರು 'ಸೃಜನ್'ದ ಸದಸ್ಯರಾಗಿದ್ದಾರೆ. ಜಾಹಿರಾತುಗಳ ಮೂಲಕ ಈ ವಸ್ತ್ರಗಳ ವೈಶಿಷ್ಟ್ಯವನ್ನು ತಿಳಿಸುವುದು ದುಬಾರಿಯಾಗುತ್ತದಾದ್ದರಿಂದ ಕೇವಲ ಪದಾರ್ಥಗಳ ಗುಣಮಟ್ಟ ಹಾಗೂ ಹಿರಿಮೆಯನ್ನು ಕಾಪಾಡುವತ್ತ ಇವರು ಪ್ರಾಶಸ್ತ್ಯ ನೀಡುತ್ತಿದ್ದಾರೆ. ಖರೀದಿಸುವವರ ಪ್ರಶಂಸೆಯೇ ಇವರಿಗೆ ಸ್ಫೂರ್ತಿ.



'ಸೃಜನ್' ಸಂಸ್ಥೆಯ ಒಂದು ಸಂಚಾರಿ ಘಟಕವೂ ಕಾರ್ಯಪ್ರವೃತ್ತವಾಗಿದೆ. ೫೦೦ ಶ್ರೇಷ್ಠ ಕಲಾವಿದರು ತಯಾರಿಸಿರುವ ೩೦" x ೪೦" ಅಳತೆಯ ೧,೦೦೦ ಚಿತ್ರಪಟಗಳಲ್ಲಿ ಆಯ್ಕೆಮಾಡಿದ ಸುಮಾರು ೫೦ ಚಿತ್ರಪಟಗಳನ್ನು ಈ ವಾಹನ ಹಳ್ಳಿಹಳ್ಳಿಗಳಿಗೆ ಕೊಂಡೊಯ್ಯುತ್ತದೆ. ೧೫ ವಿವಿಧ ಕಸೂತಿ ಕಲೆಗಳನ್ನು ಪ್ರದರ್ಶಿಸಿ, ಇತರ ಜನಾಂಗಗಳಲ್ಲಿರುವ ಕಲೆಯ ಸೊಬಗನ್ನು ಪರಿಚಯಿಸುವುದೇ ಈ ಕಾರ್ಯಕ್ರಮದ ಉದ್ದೇಶ. ತಾವು ಗಳಿಸಬೇಕಾದ ಕುಶಲತೆಯನ್ನು ಮಹಿಳೆಯರು ಈ ಮೂಲಕ ತಿಳಿಯುವುದರೊಂದಿಗೆ ಹೊಸ ಹೊಸ ಬಣ್ಣಗಳನ್ನು ಬಳಸುವ ರೀತಿ ಹಾಗೂ ವಿನ್ಯಾಸಗಳನ್ನು ಕಲಿಯುವುದಕ್ಕೂ ಇದು ಸಹಕಾರಿ.

ಸಮಾಜದಲ್ಲಿ ಆಗುತ್ತಿರುವ ತ್ವರಿತ ಗತಿಯ ಬದಲಾವಣೆಗಳೊಂದಿಗೆ ಸರಿದೂಗಿಸಿಕೊಂಡು ಹೋಗಲು ಮುಂದಿನ ವರ್ಷಗಳಲ್ಲಿ ಮಾಡಬೇಕಾಗಿರುವ ಸುಧಾರಣೆಗಳತ್ತ ಕೂಡ ಈಕೆ ಗಮನ ಹರಿಸುತ್ತಿದ್ದಾರೆ. ಬೇರೆ ಬೇರೆ ದೇಶಗಳಲ್ಲಿರುವ ಇಂತಹ ಗ್ರಾಮೀಣ ಕಲೆಗಳನ್ನು ಪರಿಚಯಿಸಿ, ಉತ್ತಮ ಅಂಶಗಳನ್ನು ನಮ್ಮ ಪರಿಸರಕ್ಕೆ ಅಳವಡಿಸಿಕೊಳ್ಳುವುದು ಆವಶ್ಯಕ ಎಂಬುದು ಈಕೆಯ ಅಭಿಮತ. ನಿರಂತರವಾದ ಬೇಡಿಕೆಯಿದ್ದರೆ ಈ ಸಂಸ್ಥೆಯ ಉತ್ಪನ್ನಗಳು ಮಾರಾಟವಾಗುತ್ತವೆ ಮತ್ತು ಖರೀದಿಸುವವರಿಗೂ ಸಂತೃಪ್ತಿಯಿರುತ್ತದೆ. ಇದೇ ತಮ್ಮ ಉದ್ದೇಶವೆನ್ನುತ್ತಾರೆ ಈಕೆ.